# ಜಿಲ್ಲಾ ಮಟ್ಟದ ಅರ್ಧವಾರ್ಷಿಕ ಪರೀಕ್ಷೆ
## ಸೆಪ್ಟೆಂಬರ್–2019
## 10ನೆಯ ತರಗತಿ
## I LANGUAGE - KANNADA

ಸಮಯ : 03–00 ಗಂಟೆಗಳು　　　　ಗರಿಷ್ಠ ಅಂಕಗಳು : 100

---

**I** ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚುಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 6 x 1 = 6

1. ಮರೆಯಾಗಿ ಈ ಪದದಲ್ಲಿರುವ ಅನುನಾಸಿಕಾಕ್ಷರ
   (ಎ) ಮ　　(ಬಿ) ರೆ
   (ಸಿ) ಯಾ　　(ಡಿ) ಗಿ.

2. ತೇಜಗೆಡೆ ಪದವು ಈ ಸಂಧಿಯದ್ದಾಗಿದೆ.
   (ಎ) ಲೋಪ　　(ಬಿ) ಆಗಮ
   (ಸಿ) ಆದೇಶ　　(ಡಿ) ಜಶ್ತ್ವ

3. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.
   (ಎ) ಆವರಣ　　(ಬಿ) ವಿವರಣಾತ್ಮಕ
   (ಸಿ) ಉದ್ಧರಣ　　(ಡಿ) ಭಾವಸೂಚಕ

4. ಅಕರ್ಮಕಧಾತು ಪದವಿದು.
   (ಎ) ಕೊಡು　　(ಬಿ) ಬಿಡು
   (ಸಿ) ತಿದ್ದು　　(ಡಿ) ಓಡು

5. ಕರಣಾರ್ಥ ಈ ವಿಭಕ್ತಿಯದ್ದಾಗಿದೆ.
   (ಎ) ಪ್ರಥಮ　　(ಬಿ) ದ್ವಿತೀಯ
   (ಸಿ) ತೃತೀಯ　　(ಡಿ) ಚತುರ್ಥಿ

6. ಸಾಮಾನ್ಯಾರ್ಥಕಾವ್ಯಯ ಪದವಿದು.
   (ಎ) ಮೆಲ್ಲಗೆ　　(ಬಿ) ಅಹುದು
   (ಸಿ) ಆದ್ದರಿಂದ　　(ಡಿ) ಅದುವೇ

**II** ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4 x 1 = 4

7. ಇರುಳಿರುಳು : ದ್ವಿರುಕ್ತಿ :: ಸುತ್ತಮುತ್ತ : ..............................
8. ಕಾಗದ : ಹಿಂದೂಸ್ಥಾನಿ :: ತಂಬಾಕು : ..............................
9. ಕೈವಾರ : ಹೊಗಳಿಕೆ :: ಕಿಂಕರ : ..............................
10. ಭೂಮಿಜಾತೆ : ಬಹುವ್ರೀಹಿ ಸಮಾಸ :: ಮುಂಗೈ : ..............................

III ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 7 x 1 = 7

11. ಶಬರಿಯು ಯಾರ ಆಶ್ರಮದಲ್ಲಿ ವಾಸವಿದ್ದಳು?
12. ದ.ರಾ. ಬೇಂದ್ರೆಯವರ ಪ್ರಕಾರ ಹಕ್ಕಿಯು ಯಾರನ್ನು ಹರಸಿದೆ?
13. ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು?
14. ರಾಜೀವ ಸಖಿನೆಂದರೆ ಯಾರು?
15. ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?
16. ಕುವೆಂಪುರವರು ವಿವೇಕಾನಂದರನ್ನು ಏನೆಂದು ಕರೆದಿದ್ದಾರೆ.
17. "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ" ಎಂದು ಹೇಳಿದವರು ಯಾರು?

IV ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10 x 2 = 20

18. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?
19. ಲಂಡನ್ನಿನ ಹೆಣ್ಣು ಮಕ್ಕಳು ಯಾವ, ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?
20. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ಸಂಸ್ಥಾನವು 'ಮಾದರಿ ಮೈಸೂರು' ಎಂದು ಹೆಸರು ಪಡೆಯಲು ಕಾರಣವೇನು?
21. ಹಲಗಲಿಗೆ ದಂಡು ಬರಲು ಕಾರಣವೇನು?
22. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ.
23. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು?
24. ವಿವೇಕಾನಂದರು ಧಾರ್ಮಿಕ ಮೂಲಭೂತವಾದಿಯಾಗಿರಲಿಲ್ಲ ಹೇಗೆ?
25. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?
26. ಯಾರು ಯಾರಿಗೆ ವಸಂತ ಮುಖ ತೋರಲಿಲ್ಲ?
27. ಒಡೆಯನ ಮನೆಯ ಅಂಗಳದ ಪ್ರಕೃತಿ ಸೌಂದರ್ಯ ಪುಟ್ಟ ಪೋರಿಗೆ ಹೇಗೆ ಕಂಡುಬಂದಿತು?

V ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ. 2 x 3 = 6

28. ಪು. ತಿ. ನ
29. ಜಿ. ಎಸ್. ಶಿವರುದ್ರಪ್ಪ

VI ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ 1 x 3 = 3

30. ಶೌರಿ ಕೇಳ್ಳೈ ನಾಳೆ ಸಮರದ
ಸಾರದಲಿ ತೋರುವೆನು ನಿಜಭುಜ
ಶೌರಿಯದ ಸಂಪನ್ನತನವನು ಪಾಂಡುತನಯರಲಿ

VII ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ. 1 x 3 = 3

31. "ಒಳಗಿನ ಮಂದಿ ಗುಂಡು ಹೊಡೆದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ"

VIII ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 x 3 = 3

32. ತಾಳಿದವನು ಬಾಳಿಯಾನು

ಅಥವಾ

ಕೂಡಿ ಬಾಳಿಗರೆ ಸ್ವರ್ಗ ಸುಖ

IX ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ 6 x 3 = 18

33. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ"

34. "ಮನೆ ಹಿಡಿದು ಇರುವ ತರುಣನ ಬುದ್ಧಿಮನೆಯಮಟ್ಟದ್ದೇ"

35. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನುಸೇರಿಸಿತು"

36. "ಸಾರ್ವಭೌಮರ ನೆತ್ತಿಯ ಕುಕ್ಕಿ"

37. "ಜೀವ ಸತ್ತುಹೋಗುವುದು ಗೊತ್ತ"

38. "ಮಾರಿಗೌತಣವಾಯ್ತು ನಾಳಿನ ಭಾರತವು"

X ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 x 4 = 4

39. ನೀಲಮೇಘ ..................................................................

.............................................................................................

.............................................................................................

.............................................................................ಮಾಡಿದೆ ಕಣ್ಣಾ.

ಅಥವಾ

ಯುಗಯುಗಗಳ ..................................................................

.............................................................................................

.............................................................................................

.............................................................................ಹಸುಮಕ್ಕಳ ಹರಸಿ

XI ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ. 1 x 4 = 4

40. ಮರಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯಾರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ

XII ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x 4 = 8

41. ಮುದುಕಿಯು ತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದ್ದಾಳೆ ವಿವರಿಸಿ.

ಅಥವಾ

ರಾಹಿಲನು ಮುದುಕಿಯ ಕುಟುಂಬಕ್ಕೂ ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

42. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ ವಿವರಿಸಿ.

**ಅಥವಾ**

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

**XIII ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1 x 4 = 4 (2 + 2)**

43. ಜೀವನವನ್ನು ಕುರಿತು ನಮ್ಮ ದೃಷ್ಟಿಕೋನ ಬದಲಿಸಿದಾಗ ನಮ್ಮ ಜೀವನವೇ ಬದಲಾಗುವುದು ಎಂದು ಅಮೇರಿಕಾದ ಪ್ರಸಿದ್ಧ ಮನೋವಿಜ್ಞಾನಿ ಹೇಳಿದ ಆದರೆ ದೃಷ್ಟಿಕೋನ ಹೇಗೆ ಬದಲಿಸಿತು? ನಮ್ಮ ಸುತ್ತಮುತ್ತಲಿನ ವಸ್ತುಗಳ ವ್ಯಕ್ತಿಗಳ ನೈಜ ಸ್ವಭಾವವನ್ನು ತಿಳಿದಾಗ ನಮ್ಮ ವ್ಯಕ್ತಿತ್ವದ ಮೂಲ ಸ್ವಭಾವದ ಪರಿಚಯವಾದಾಗ ನಮ್ಮಲ್ಲಿ ಇತರ ಸಾಮಾನ್ಯರಲ್ಲಿ ಕಂಡುಬರುವ ವಿಶೇಷ ಬದಲಾವಣೆ ಸಾಧ್ಯ. ವಿಜ್ಞಾನವು ನಮಗೆ ಬಾಹ್ಯ ಪ್ರಪಂಚ ನೂರಾರು ವಿಷಯಗಳನ್ನು ತಿಳಿಸುತ್ತದೆಯಾದರೂ ಜೀವನದ ಅರ್ಥ ಮತ್ತು ಉದ್ದೇಶಗಳನ್ನು ತಿಳಿಸಿದೆ, ತಿಳಿಸೀತು, ಎನ್ನುವಂತಿಲ್ಲ. ಅಲ್ಬರ್ಟ್ ಐನ್‌ಸ್ಟಿನ್ ನನ್ನ ಕೊನೆಯ ದಿನಗಳಿಂದ ಸುಖಸೌಕರ್ಯಗಳಿಗೆ ಬೇಕಾದ ಕೆಲವು ಸಾಧನ ಸೌಲಭ್ಯಗಳನ್ನು ಒದಗಿಸಿದರೂ ಜೀವನದ ಪರಮೋದ್ದೇಶದ ತಿಳಿವು ಅದನ್ನು ಸಾಧಿಸುವ ಸಾಮರ್ಥ್ಯದ ಹೊಳಹು ಮತ್ತೊಂದು ಮೂಲದಿಂದಲೇ ಬರಬೇಕು" ಅದನ್ನೆ ಧ್ವನಿಸುತ್ತದೆ.

**ಪ್ರಶ್ನೆಗಳು :**

1) ಜೀವನದ ಬಗೆಗೆ ಐನ್‌ಸ್ಟಿನ್‌ರವರು ತಮ್ಮ ಗ್ರಂಥದಲ್ಲಿ ಏನೆಂದು ಹೇಳಿದ್ದಾರೆ?

2) ನಮ್ಮಲ್ಲಿ ಬದಲಾವಣೆ ಯಾವಗ ಸಾಧ್ಯ?

**XIV ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1 x 5 = 5**

44. ನಿಮ್ಮನ್ನು ಬೆಂಗಳೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ವಿನಯ್ ಎಂದು ಭಾವಿಸಿಕೊಂಡು ಮೈಸೂರಿನಲ್ಲಿರುವ ನಿಮ್ಮ ತಾಯಿ ಸುಜಾತ ರವರಿಗೆ ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ತಿಳಿಸಿ ಒಂದು ಪತ್ರ ಬರೆಯಿರಿ.

**ಅಥವಾ**

ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಸುಭಾಷ್ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಪರಿಸರ ದಿನಾಚರಣೆ ವರದಿಯನ್ನು ಪ್ರಕಟಿಸುವಂತೆ ಕೋರಿ ಪ್ರಜಾವಾಣಿ ಪತ್ರಿಕೆಯ ಸಂಪಾದಕರಿಗೆ ಒಂದು ಪತ್ರವನ್ನು ಬರೆಯಿರಿ.

**XV ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ.**

**1 x 5 = 5**

45. ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

**ಅಥವಾ**

ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು

* * * *